**ದಿನಾಂಕ: 10-10-2025ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಬಿ.ಬಿ ವಕೀಲರಿಂದ**

1. ಈ ಕೇಸನ್ನು ನಿಮ್ಮ ಹೊಲ ಬಿಟ್ಟುಕೊಡಬೇಕು ಎಂದು ಹಾಕಿದ್ದೀರಿ ಎಂದರೆ ಸರಿ. ಆ ಹೊಲದಲ್ಲಿ ಎಷ್ಟು ಜನ ಕಬ್ಜಾದಲ್ಲಿ ಇದ್ದಾರೆ ಎಂದರೆ ದೇವಪ್ಪ ತಂದೆ ತಿಪ್ಪಣ್ಣ, ಸಿದ್ದಪ್ಪ ತಂದೆ ಅಯ್ಯಪ್ಪ, ಸಾಬಣ್ಣ ತಂದೆ ಅಯ್ಯಪ್ಪ ಎಂದು ಉತ್ತರಿಸುತ್ತಾರೆ. ಮಲ್ಲಮ್ಮ ಗಂಡ ತಿಪ್ಪಣ್ಣರವರು ಸಹ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ. ಈ ಜಮೀನು ಒಟ್ಟು 9 ಎಕರೆ 32

ಗುಂಟೆ ಇರುತ್ತದೆ. ಈ ಜಮೀನಿನ ಪಶ್ಚಿಮ ದಿಕ್ಕಿಗೆ 3 ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಜಮೀನಿಗೆ ಹತ್ತಿಕೊಂಡಂತಹ ಪೂರ್ವ ದಿಕ್ಕಿನ 2 ಎಕರೆ ಜಮೀನಿನಲ್ಲಿ ಸಿದ್ದಪ್ಪ ತಂದೆ ಅಯ್ಯಪ್ಪ ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿ 2 ಎಕರೆ 5 ಗುಂಟೆ ಎಂದು ಉತ್ತರಿಸುತ್ತಾರೆ. ಸಿದ್ದಪ್ಪ ತಂದೆ ಅಯ್ಯಪ್ಪರವರ ಜಮೀನಿನ ಪೂರ್ವಕ್ಕೆ 2 ಎಕರೆ 22 ಗುಂಟೆ ಜಮೀನು ಮಲ್ಲಮ್ಮ ಗಂಡ ತಿಪ್ಪಣ್ಣ ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ಮಲ್ಲಮ್ಮ ಗಂಡ ತಿಪ್ಪಣ್ಣರವರ ಜಮೀನಿಗೆ ಹೊಂದಿಕೊಂಡು 2 ಎಕರೆ ಜಮೀನು ಶಿವರಾಯ ಸಾಗುವಳಿ ಮಾಡುತ್ತಾರೆ ಎಂದರೆ ಸರಿ. 16 ವರ್ಷಗಳಿಂದ ನೀವೆಲ್ಲರೂ ಈ ರೀತಿ ಸಾಗುವಳಿ ಮಾಡುತ್ತಾ ಬಂದಿರುತ್ತೀರಿ ಎಂದರೆ ಹೌದು ಎಂದು ಉತ್ತರಿಸುತ್ತಾರೆ.

2. ಮಶಾಕ್ ಸಾಬ್ ಜಾಗಿರದಾರ, ಮಹಾದೇವಪ್ಪ ಕೊಡಚಿ, ಅಬೀಬ ಪಟೇಲ, ದೇವಪ್ಪ ಕಂದಗಲ್, ಅಯ್ಯಣ್ಣ ಅರಿಕೇರಿ, ಸಿದ್ದಪ್ಪ ಗೋಗಿರವರು ನನಗೆ ಗೊತ್ತು. ನಿಮ್ಮ ತಂದೆ 2006ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಇವರೆಲ್ಲರ ಸಮಕ್ಷಮ ಒಪ್ಪಿಗೆ ಪತ್ರ ಬರೆದುಕೊಟ್ಟು ಈ ರೀತಿ ಸಾಗುವಳಿ ಮಾಡುತ್ತಾ ಬಂದಿರುತ್ತೀರಿ ಎಂದರೆ ಪತ್ರ ಮಾಡಿರುವುದು ಸುಳ್ಳು ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದಂತಹವರ ಸಮಕ್ಷಮ ದಿನಾಂಕ 25-11-2009 ರಂದು ಒಪ್ಪಿಗೆ ಪತ್ರದ ಮೇಲೆ ಹೆಬ್ಬೆಟ್ಟಿನ ಸಹಿ ಹಾಕಿರುತ್ತೇನೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಈ ಹೊಲ ಯಾವ ವರ್ಷದಲ್ಲಿ ಕೊಟ್ಟಿದ್ದಾರೆ ಎಂದರೆ 1972ರಲ್ಲಿ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಅಳತೆ ಆಗಿರುವುದಿಲ್ಲ ಎಂದರೆ ಸರಿ. 1972ರಲ್ಲಿ ಜಮೀನು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೀರಿ ಆ ಬಗ್ಗೆ ಇಲ್ಲಿಯವರೆಗೆ ಸಾಗುವಳಿ ಚೀಟಿ ಕೊಟ್ಟಿಲ್ಲ ಎಂದರೆ ಸರಿ. 1972 ರಿಂದ ಇಲ್ಲಿಯವರೆಗೆ ಯಾವತ್ತಿಗೂ ಸಹ ಅಳತೆ ಮಾಡಿ ಸ್ವಾಧೀನಕ್ಕೆ ಕೊಟ್ಟಿಲ್ಲ ಎಂದರೆ ಸರಿ. 1972 ರಿಂದ ಇಲ್ಲಿಯವರೆಗೆ ನೀವಾಗಲೀ ನಿಮ್ಮ ತಂದೆಯಾಗಲೀ ಸದರಿ ಜಮೀನು ಅಳತೆ ಮಾಡಿ ಸದರಿ ಜಮೀನನ್ನು ನಿಮ್ಮ ಸ್ವಾಧೀನಕ್ಕೆ ಕೊಡಬೇಕು ಎಂದು ತಹಸೀಲ ಕಚೇರಿಗೆ ಅರ್ಜಿಯನ್ನು ಕೊಟ್ಟಿಲ್ಲ ಎಂದರೆ

ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಜಮೀನು ಮೂಲವಾಗಿ ಸಂಜೀವಪ್ಪ ತಂದೆ ಸಿದ್ದಪ್ಪ ಬೀರನೂರುರವರದ್ದು ಎಂದರೆ ಸರಿ. ಪ್ರತಿವಾದಿಯರು ಸಂಜೀವಪ್ಪನ ವಾರಸುದಾರರು ಎಂದರೆ ಸರಿ. ಸಂಜೀವಪ್ಪ ತಂದೆ ಸಿದ್ದಪ್ಪರವರು ತೀರಿಕೊಂಡ ನಂತರ ಪ್ರತಿವಾದಿಯರು ಸಾಗುವಳಿ ಮಾಡುತ್ತಾ ಬಂದಿದ್ದರು ಎಂದರೆ ಸರಿ.

3. 2007ರಲ್ಲಿ ನಿಮ್ಮ ತಂದೆಯವರು ಒಂದು ಕೇಸನ್ನು ಹಾಕಿದ್ದರು ಎಂದರೆ ಸರಿ. ಸದರಿ ಕೇಸು ನಿಮ್ಮ ತಂದೆಯ ಪರವಾಗಿ ಆಗಿದ್ದರೂ ಸಹ ಪ್ರತಿವಾದಿಯರು ಸದರಿ ಜಮೀನಿನ ಸ್ವಾಧೀನವನ್ನು ಬಿಟ್ಟುಕೊಟ್ಟಿರಲಿಲ್ಲ ಎಂದರೆ ಸರಿ. 2007ನೇ ಇಸವಿಯಲ್ಲಿ ನೀವಾಗಲೀ ನಿಮ್ಮ ತಂದೆಯಾಗಲೀ 9 ಎಕರೆ ಜಮೀನಿನ ಕಬ್ಜೆಯಲ್ಲಿ ಇರಲಿಲ್ಲ ಎಂದರೆ ನಮ್ಮ ತಂದೆ ಇದ್ದರು ಆಗ ನಾನು ಚಿಕ್ಕವನಿದ್ದೆ ಎಂದು ಉತ್ತರಿಸುತ್ತಾರೆ. ಅವರು ಜಾಗವನ್ನು ಬಿಟ್ಟು ಕೊಟ್ಟಿಲ್ಲ ಎಂದು ಹಿರಿಯರ ಮುಂದೆ ನ್ಯಾಯ ಪಂಚಾಯತಿ ಮಾಡಿದ್ದರು ಎಂದರೆ ಸರಿ. ಆ ನ್ಯಾಯ ಪಂಚಾಯತಿ ಪ್ರಕಾರ ಪಶ್ಚಿಮದ ಕಡೆ ಇರುವ 3 ಎಕರೆ ಜಮೀನಿನಲ್ಲಿ ಇಲ್ಲಿಯವರೆಗೆ ಸ್ವಾಧೀನದಲ್ಲಿ ಇದ್ದೀರಿ ಎಂದರೆ ಸರಿ. ಪ್ರತಿವಾದಿಯರು ಬಹಳ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಎಂದು ಊರಿನವರಿಗೆ ಮತ್ತು ನಿಮಗೂ ಗೊತ್ತಿತ್ತು ಎಂದರೆ ಸರಿ. 2006ರಲ್ಲಿ ನಿಮ್ಮ ತಂದೆ ಜೀವಂತ ಇದ್ದಾಗ ಪ್ರತಿವಾದಿಯರು ಕಬ್ಜಾ ಬಿಟ್ಟುಕೊಡಬೇಕು ಎಂದು ನಿಮ್ಮ ತಂದೆಯವರು ಪ್ರತಿವಾದಿಯರ ವಿರುದ್ಧ ಕೇಸು ಏನಾದರೂ ಮಾಡಿದ್ದಾರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. 2006 ರಿಂದ ಇಲ್ಲಿಯವರೆಗೆ ಕಬ್ಜಾ ಬಿಟ್ಟುಕೊಡಬೇಕು ಎಂದು ಪ್ರತಿವಾದಿಯರ ವಿರುದ್ಧ ಎಲ್ಲಿಯಾದರೂ ಅರ್ಜಿ ಕೊಟ್ಟಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

4. ಒಟ್ಟು 9 ಎಕರೆ ಜಮೀನಿನ ಉತ್ತರಕ್ಕೆ ಭೀಮಣ್ಣ ಬಡಿಗೇರರವರ ಜಮೀನು, ದಕ್ಷಿಣಕ್ಕೆ ಜುಮ್ಮಣ್ಣ ಪೂಜಾರಿರವರ ಜಮೀನು ಬರುತ್ತದೆ ಎಂದರೆ ಸರಿ. ಈ ಕೇಸನ್ನು ಬಿಟ್ಟು

ಪ್ರತಿವಾದಿಯರು ಸಾಗುವಳಿ ಮಾಡುವುದನ್ನು ನಿಲ್ಲಿಸಬೇಕು ಎಂದು ಎಲ್ಲಿಯೂ ಅರ್ಜಿ ಕೊಟ್ಟಿಲ್ಲ ಎಂದರೆ ಸರಿ. ಸುಮಾರು 45 ವರ್ಷಗಳಿಂದ ದಾವಾದ ಆಸ್ತಿಯ ಭಾಗದಲ್ಲಿ ಪ್ರತಿವಾದಿಯರು ಸಾಗುವಳಿ ಮಾಡುತ್ತಾ ಬಂದಿದ್ದಾರೆ ಅದರಿಂದ ಅವರಿಗೆ ಆದಾಯ ಇದೆ ಎಂದರೆ ಸರಿಯಲ್ಲ.

5. ನಿಮ್ಮ ಕುಟುಂಬಕ್ಕೆ ಎಷ್ಟು ಜಮೀನು ಇದೆ ಎಂದರೆ 2 ಎಕರೆ 4 ಗುಂಟೆ ಜಮೀನು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ಒಟ್ಟು ನಾಲ್ಕು ಜನ ಮಕ್ಕಳು ಇರುತ್ತಾರೆ. ಅವರುಗಳೆಂದರೆ, ಹಣಮಂತ, ಭೀಮಪ್ಪ, ದೇವಕಿ ಮತ್ತು ದ್ರೌಪತಿ ಎಂದು ಉತ್ತರಿಸುತ್ತಾರೆ. ಈ ದಾವೆಯನ್ನು ಹಾಕುವಾಗ ಭೀಮಪ್ಪ, ದೇವಕಿ ಮತ್ತು ದ್ರೌಪತಿಗೆ ಕೇಳಿಲ್ಲ ಮತ್ತು ಅವರ ಸಹಿಯನ್ನು ಸಹ ಪಡೆದಿಲ್ಲ ಎಂದರೆ ಸರಿ. ಈ ದಾವೆಯ ಬಗ್ಗೆ ಅವರಿಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಭೀಮಪ್ಪ, ದೇವಕಿ ಮತ್ತು ದ್ರೌಪತಿರವರು ಸಹ ಈ ದಾವಾದ ಆಸ್ತಿಯಲ್ಲಿ ಹಕ್ಕುದಾರರು ಆಗುತ್ತಾರೆ ಎಂದರೆ ಸರಿ. ದಾವಾದ ಜಮೀನಿನಲ್ಲಿ ಯಾರು ಯಾರು ಎಷ್ಟೆಷ್ಟು ಸ್ವಾಧೀನದಲ್ಲಿದ್ದಾರೆ ಎಂದು ಅಳತೆ ಮಾಡಿ ಈ ದಾವೆಯನ್ನು ಹಾಕಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

6. ಪ್ರತಿವಾದಿಯರು ಸುಮಾರು 50 ವರ್ಷಗಳಿಂದ ದಾವಾದ ಜಮೀನಿನಲ್ಲಿ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದು ಎಲ್ಲಿಯಾದರೂ ಪೊಲೀಸ್ ಠಾಣೆಯಲ್ಲಿ ದೂರು ಏನಾದರೂ ನೀಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ತಿಳುವಳಿಕೆ ಬಂದಾಗಿನಿಂದಲೂ ದಾವಾದ ಜಮೀನಿನ ಸ್ವಾಧೀನದಲ್ಲಿ ಪ್ರತಿವಾದಿಯರು ಇದ್ದಾರೆಂದು ಗೊತ್ತಿತ್ತು ಎಂದರೆ ಸರಿ. ನಿಮ್ಮ ತಂದೆ ಜೀವಂತವಿದ್ದಾಗಿನಿಂದಲೂ 1981 ರಿಂದ ಪ್ರತಿವಾದಿಯರು ದಾವಾದ ಜಮೀನಿನ ಸ್ವಾಧೀನದಲ್ಲಿದ್ದಾರೆಂದು ಅವರಿಗೂ ಸಹ ಗೊತ್ತಿತ್ತು ಎಂದರೆ ಸರಿ. ನಿಮ್ಮ ತಂದೆಯವರು ಮತ್ತು ನೀವು ಪ್ರತಿ ವರ್ಷ ಪಶ್ಚಿಮದ ಕಡೆ ಇರುವ 3

ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಾ ಬಂದಿರುತ್ತೀರಿ ಎಂದರೆ ಈಗ ಮಾಡಿರುತ್ತೇವೆ ಮೊದಲು ಮಾಡಿಲ್ಲ ಎಂದು ಉತ್ತರಿಸುತ್ತಾರೆ. 16 ವರ್ಷಗಳ ಹಿಂದೆ ಒಟ್ಟು ಜಮೀನಿನಲ್ಲಿ ಸಾಗುವಳಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 2006-07ನೇ ಇಸವಿಯಿಂದ 3 ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. 2006ನೇ ಇಸವಿಯವರೆಗೆ ಪ್ರತಿವಾದಿಯರು ಒಟ್ಟು ಜಮೀನಿನಲ್ಲಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂಬ ವಿಷಯ ನಿಮಗೆ ಗೊತ್ತಿತ್ತು ಎಂದರೆ ಸರಿ. 2006ನೇ ಇಸವಿಯವರೆಗೆ ಪ್ರತಿವಾದಿಯರು ಒಟ್ಟು ಜಮೀನಿನಲ್ಲಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂಬ ವಿಷಯ ಊರಿನವರಿಗೂ ಸಹ ಗೊತ್ತಿತ್ತು ಎಂದರೆ ಸರಿ.

7. 1981 ರಿಂದಲೂ ಸಹ ಪ್ರತಿವಾದಿಯರು ಇಲ್ಲಿಯವರಗೂ ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂಬ ವಿಷಯ ನಿಮಗೂ ಊರಿನವರಿಗೂ ಗೊತ್ತಿದ್ದರೂ ಸಹ 2021 ನೇ ಇಸವಿಯವರೆಗೆ ಕಬ್ಜಾ ಕೇಳಿ ಕೇಸನ್ನು ಹಾಕಿಲ್ಲ ಎಂದರೆ ಸರಿ. ಮಲ್ಲಮ್ಮಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಈ ಜಮೀನಿನ ಮೇಲೆ ನಿಮಗೆ ಯಾವುದೇ ರೀತಿಯ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ಪ್ರತಿವಾದಿಗೆ ಸಂಬಂಧಿಸಿದ್ದು ಅವರೇ ಮಾಲೀಕರು ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ